ಎತ್ತಿನ ಬಂಡಿ, ದಾರಿಯ ಮಧ್ಯೆ ಮಲಗಿ ಕಾಲಿಂದ ಕಿವಿ ತುರಿಸಿಕೊಳ್ಳುತ್ತಿರುವ ಒಂದು ನಾಯಿ. ಆಮೇಲೆ ಯಾವುದೋ ಯೋಚನೆಯಲ್ಲಿ ಮುಳುಗಿ ಹೋಗಿರುವಂತೆ ಕಾಣಿಸುತ್ತಿರುವ ಕಮಲಾಕ್ಷಿಯ ಕ್ಲೋಸ್ ಅಪ್. ಇದ್ದಕ್ಕಿದ್ದಂತೆ ಬೆಕ್ಕೊಂದು ಮಿಯಾಂವ್ ಅಂದದ್ದು ಕೇಳಿಸಿ ಅವಳು ತಲೆ ಹೊರಳಿಸಿದ್ದೇ ಕ್ಯಾಮೆರಾ ನಿಧಾನವಾಗಿ ರೂಮಿನ ಒಂದು ಭಾಗವನ್ನೂ ಅದರ ಬಾಗಿಲಿನಾಚೆಗಿದ್ದ ಹಾಲನ್ನೂ ತೋರಿಸುತ್ತಿರುವಾಗ ಧನಂಜಯರು, 'ಬೆಕ್ಕನ್ನು ಒಂದು ಶಾಟ್‌ನಲ್ಲಿ ಕೂರಿಸುವುದು ಕಷ್ಟ, ಕ್ಯಾಮೆರಾ ಚಾಲೂ ಆದದ್ದೇ ಓಡಿಹೋಗುತ್ತೆ' ಎಂದರು.

ಇಳಿಬಿಸಿಲಿರುವ ಒಂದು ಸಂಜೆ. ಮರಗಳನ್ನು ತೂರಿ ಬರುತ್ತಿರುವ ಸೂರ್ಯನ ಕಿರಣಗಳು ಕಲ್ಲು ಮಂಚಿಗೆಯ ಮೇಲೆ ಕೂತಿರುವ ಕಮಲಾಕ್ಷಿಯನ್ನೂ ರಮಾಕಾಂತನನ್ನೂ ಬೆಳಗಿಸಿದವು. ರಮಾಕಾಂತ ಎಲ್ಲಿಂದಲೋ ಆಜ್ಞೆಯಾಯಿತೆನ್ನುವಂತೆ ಕಮಲಾಕ್ಷಿಯನ್ನು ಬಿಗಿದಪ್ಪಿ, ಅವಳ ಮುಖಕ್ಕೆ ಮುಖವಿಟ್ಟು 'ಎಂಥ ಚೆಂದ ನೀನು' ಎಂದ. ಧನಂಜಯರು ತಮ್ಮಲ್ಲೇ ಎಂಬಂತೆ, 'ಅದಕ್ಕೆ ಕಾರಣ ಮೇಕಪ್ಪು' ಎಂದರು. ಸುಂದರವಾಗಿ ಕಾಣಿಸುವುದೆಂಬ ಕಾರಣದಿಂದ ಚಿತ್ರೀಕರಿಸಲಾದ ಒಂದು ವಾಸ್ತವ ಜೀವನಕ್ಕೂ ಚಿತ್ರೀಕರಿಸಿರುವುದರಿಂದಲೇ ಆ ವಾಸ್ತವ ಜೀವನ ಸುಂದರವಾಗಿ ಕಾಣಿಸುವುದಕ್ಕೂ ನಡುವೆ ಇರುವ ಗೆರೆ ತೀರಾ ತೆಳುವು.



ರಮಾಕಾಂತ ಆ ಕುಟುಂಬಕ್ಕೆ ಹತ್ತಿರವಾಗಿದ್ದವನು. ಅವನು ಪೊಲೀಸ್ ಇನ್‌ಸ್ಪೆಕ್ಟರಿಗೆ ಏನೋ ಹೇಳಲೆಂದು ಬಾಯಿ ತೆರೆಯುತ್ತಿದ್ದಂತೆ ಒಂದು ಫ್ಲ್ಯಾಶ್‌ಬ್ಯಾಕ್. ಜನರಿಂದ ಗಿಜಿಗುಡುತ್ತಿರುವ ರಸ್ತೆ. ಬಗಲಲ್ಲೊಂದು ಕೊಡೆ ಇಟ್ಟುಕೊಂಡು ನಡೆಯುತ್ತಿರುವ ಕಮಲಾಕ್ಷಿಯ ಗಂಡ ಶ್ರೀನಿವಾಸ ರಾವ್ ಕಾಲಿಗೆ ತೊಡರಬಾರದೆಂದು ಬಲಗೈಯಿಂದ ತನ್ನ ಕಚ್ಚೆಪಂಚೆಯ ತುದಿಯನ್ನು ಮೇಲೆತ್ತಿ ಹಿಡಿದು ಕೊಂಡಿದ್ದಾನೆ. ಆಮೇಲೆ ಕಾಣಿಸಿದ ಬೀದಿಯಲ್ಲಿ ಅವನು ತಿರುಗಿದ್ದೇ ನಾಲ್ಕೈದು ಪುಂಡರ ಗುಂಪು ಡಿಕ್ಕಿ ಹೊಡೆದು ಅವನನ್ನು ನೆಲಕ್ಕೆ ಬೀಳಿಸುತ್ತದೆ. ಅವರಲ್ಲೊಬ್ಬ ಜೇಬಿನಿಂದ ಒಂದು ಚೂರಿ ತೆಗೆದು ಕೆಳಗೆ ಬೋರಲು ಬಿದ್ದಿದ್ದ ಶ್ರೀನಿವಾಸರಾಯನ ಬೆನ್ನಿಗೆ ತಿವಿಯುತ್ತಾನೆ. ರಮಾಕಾಂತ ಅದೆಲ್ಲಿದ್ದನೋ ಶ್ರೀನಿವಾಸರಾಯನ ಬಳಿ ಹಾಜರು. ಆಗ ಎರಡು ಮೂರು ಕ್ಲೋಸ್ ಶಾಟ್‌ಗಳಲ್ಲಿ ನೆಲಕ್ಕೆ ಬಿದ್ದಿರುವ ಶ್ರೀನಿವಾಸರಾಯನ ಬೆನ್ನು, ಆ ಬೆನ್ನಿಂದ ಹರಿದುಬರುತ್ತಿರುವ ರಕ್ತ, ಆ ರಕ್ತವನ್ನು ಬಟ್ಟೆಯಿಂದ ಒರೆಸುತ್ತಿರುವ ಒಂದು ಕೈಯಿ, ನರಳುತ್ತಿರುವ ಶ್ರೀನಿವಾಸರಾವ್ ಮುಂತಾದ ದೃಶ್ಯಗಳು. ಆ ನಂತರದ ಶಾಟ್‌ಗಳು ಶ್ರೀನಿವಾಸರಾವ್ ಒಬ್ಬ ಡಾಕ್ಟರರ ಜೊತೆ ಏನೋ ಮಾತಾಡುತ್ತಿರುವುದನ್ನು, ಯಾವುದೇ ಭಾವನೆಯಿಲ್ಲದೆ ಒಮ್ಮೆ ರಮಾಕಾಂತನನ್ನು ನೋಡಿದ್ದನ್ನು, ಆಮೇಲೆ ಪೊಲೀಸ್ ಇನ್‌ಸ್ಪೆಕ್ಟರ್ ಬಂದದ್ದೇ ಅವರ ಕೈಕುಲುಕಿದ್ದನ್ನು ತೋರಿಸುತ್ತವೆ.

ಸಿನಿಮಾ ಒಮ್ಮೆ ಪ್ರಾರಂಭವಾದರೆ ಕೊನೆಯವರೆಗೂ ನಿಲ್ಲುವುದಿಲ್ಲ; ಮಧ್ಯೆ ಮಧ್ಯೆ ನಮಗೆ ಸರಿಯಾಗಿ ಅರ್ಥವಾಗಲೆಂದು ಸುಧಾರಿಸಿಕೊಳ್ಳುವುದಿಲ್ಲ; ಹಿಂದೆ ತೋರಿಸಿದ್ದನ್ನು, ಅಗತ್ಯವಿಲ್ಲದಿದ್ದರೆ, ಮತ್ತೆ ತೋರಿಸುವುದಿಲ್ಲ; ಕಥೆ ಅಥವಾ ಕಾದಂಬರಿಯ ಹಾಗೆ ತನ್ನನ್ನು ತಾನೇ ವಿವರಿಸುವುದಿಲ್ಲ. ಈಗ ಕಮಲಾಕ್ಷಿ ಸೆರಗು ಸರಿಪಡಿಸಿಕೊಳ್ಳುತ್ತಾ ಒಂದು ಅಚ್ಚುಕಟ್ಟಾದ ಬೆಡ್‌ರೂಮನ್ನು ಪ್ರವೇಶಿಸುತ್ತಿರುವ ದೃಶ್ಯ. ಆಕ್ಷಣ ಮನುಷ್ಯಾಕಾರದಲ್ಲಿದ್ದ ಒಂದು ನೆರಳು, ಎಲ್ಲಿಂದ ಅಂತ ಗೊತ್ತಾಗದ ಹಾಗೆ, ಪ್ರತ್ಯಕ್ಷವಾಗುತ್ತದೆ. ನಾಲ್ಕೈದು ಶಾಟುಗಳು ಒಂದರ ನಂತರ ಒಂದು ಸರಿದದ್ದೇ ಆಕೆ ಇಡೀ ಥಿಯೇಟರನ್ನು ತುಂಬಿಕೊಳ್ಳುವ ಹಾಗೆ ಜೋರಾಗಿ ಕಿರುಚುತ್ತಾಳೆ. ಆ ದೃಶ್ಯ ಮಬ್ಬುಮಬ್ಬಾಗಿದ್ದೇ ಕ್ರಮೇಣ ಬೆಳ್ಳಿತೆರೆಯನ್ನು ಆವರಿಸುವ ಒಂದು ಬೆಡ್‌ರೂಮು, ಆ ಬೆಡ್‌ರೂಮಿನ ಮೂಲೆಯಲ್ಲೊಂದು ಹೆಣ. ಯಾರೋ ಬಾಗಿಲು